MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | WEDNESDAY | 19-1-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜನವರಿ 2022 ರ ಪ್ರಥಮಾರ್ದದಲ್ಲಿ ಮಲೇಶ್ಯನ್ ಪಾಮೆಣ್ಣೆ ರಫ್ತು 32% ರಿಂದ 45% ಇಳಿಕೆ

ಕಾರ್ಗೋ ಸರ್ವೇಯರ್ಸ್ ಪ್ರಕಾರ ಮಲೇಶ್ಯಾದ ಜನವರಿ 1–15 ತನಕ ಪಾಮೆಣ್ಣೆ ರಫ್ತು 32.1 ಶೇಕಡಾ ಇಳಿಕೆ ಕಂಡಿದೆ.(ಡಿಸೆಂಬರ್ 2021 ರ ಇದೇ ಅವಧಿಗೆ ಹೋಲಿಸಿದಾಗ) ಜನವರಿ 1–15 ರ ತನಕ ಮಲೇಶ್ಯನ್ ಪಾಮೆಣ್ಣೆ ರಫ್ತು ಡಿಸೆಂಬರ್ 1–15 ರಲ್ಲಿದ್ದ 725,000 ಟನ್ ಗಳಿಂದ 492,883 ಟನ್ ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ.

## 2021 ಅಕ್ಟೋಬರ್–ಡಿಸೆಂಬರ್ ಅವಧಿಯ ಸಕ್ಕರೆ ರಫ್ತು ನಾಲ್ಕು ಪಟ್ಟು ಸಮೀಪ ಹೆಚ್ಚಳ

ಭಾರತದ ಸಕ್ಕರೆ ರಫ್ತು 2021 ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ 17 ಲಕ್ಷ ಟನ್ ಗಳಾಗಿದ್ದು 2020 ರ ಇದೇ ಅವಧಿಯಲ್ಲಿ ರಫ್ತು ಮಾಡಲಾಗಿತ್ತೆಂದು ISMA ಹೇಳಿದೆ. ಮಿಲ್ ಗಳು 38–40 ಲಕ್ಷ ಟನ್ ಸಕ್ಕರೆ ರಫ್ತು ಮಾಡಲು ಕರಾರು ಮಾಡಿಕೊಂಡಿವೆಯೆನ್ನಲಾಗಿದ್ದು, ಅಂತರಾಷ್ಟ್ರೀಯ ದರ ಹೆಚ್ಚಳವಾಗಲು ಕಾಯುತ್ತಿದ್ದಾರೆನ್ನಲಾಗಿದೆ. ಅಕ್ಟೋಬರ್–2021 ಮತ್ತು ಜನವರಿ 15, 2022 ರ ಅವಧಿಯಲ್ಲಿ ಭಾರತ 151.41 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದ್ದು, ಹಿಂದಿನ ವರ್ಷದ ಇದೇ ಅವಧಿಯಲ್ಲಿ 142.78 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿತ್ತೆನ್ನಲಾಗಿದೆ.

## ಸಾಗಾಣಿಕೆ ಸೌಲಭ್ಯದ ಕೊರತೆ ಅಕ್ಕಿ ರಫ್ತಿಗೆ ಹಿನ್ನಡೆ

ಭಾರತದಿಂದ ಅಕ್ಕಿ ರಫ್ತು ಮಾಡಲು ಬಂದರುಗಳಿಗೆ ಸಾಗಾಟ ಮಾಡುವ ರೈಲ್ವೆ ವ್ಯಾಗನ್ ಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗದಿರುವುದರಿಂದ ಅಕ್ಕಿ ರಫ್ತಿಗೆ ಹಿನ್ನಡೆಯಾಗಿದೆಯೆನ್ನಲಾಗಿದೆ. ಇದರಿಂದ ಇತರ ಅಕ್ಕಿ ರಫ್ತು ದೇಶಗಳಾದ ಥೈಲಾಂಡ್, ಮ್ಯಾನ್ಮರ್ ವಿಯೆಟ್ನಾಂ ಗಳು ರಫ್ತು ಹೆಚ್ಚಿನ ಲಾಭ ಪಡೆಯಲು ಅನುಕೂಲವಾಗಿದೆಯೆನ್ನಲಾಗಿದೆ.